ಅಜ್ಜಿ ಮೊದಲಿನಂತೆ ಹಗಲು ರಾತ್ರಿ ಅಳುತ್ತಿರಲಿಲ್ಲ. ಆಕೆಯ ಅಳು ಸಾಯಂಕಾಲಗಳಿಗೆ ಮಾತ್ರ ಸೀಮಿತವಾಗಿತ್ತು. ಆದರೆ, ಎಷ್ಟು ತೀವ್ರವಾಗಿ ಅಳುತ್ತಿದ್ದಳೆಂದರೆ ರಾತ್ರಿ ಅತ್ತೂ ಅತ್ತೂ ಅವಳೊಂದು ಕುಪ್ಪೆಯಾಗಿ ನೆಲದ ಮೇಲೆ ಬಿದ್ದಿರುತ್ತಿದ್ದಳು. ರೇವತಿ ಬಿಕ್ಕಿ ಬಿಕ್ಕಿ ಅಳುತ್ತಾ ಅವಳ ಪಕ್ಕ ಮಲಗುತ್ತಿದ್ದಳು. ಮುದುಕಿಗೆ ಅಷ್ಟಾಗಿ ಕಣ್ಣು ಕಾಣಿಸುತ್ತಿರಲಿಲ್ಲ. ನೋಡಲು ವಿಚಿತ್ರವಾಗಿ ಕಾಣುತ್ತಿದ್ದಳು. ಆಕೆ ಮೊದಲಿನಷ್ಟು ಅಳುತ್ತಿರಲಿಲ್ಲ, ನಿಜ. ಆದರೆ, ರೇವತಿಯ ಮೇಲೆ ಬೈಗುಳಗಳನ್ನು ಸುರಿಸುತ್ತಿದ್ದಳು: ತನ್ನ ಕಡುಬಡತನಕ್ಕೆ, ದುರ್ವಿಧಿಗೆ ಅವಳೇ ಕಾರಣ; ಅವಳು ಕಲಿತದ್ದರಿಂದಲೇ ಹೀಗಾಯಿತು. ಮೊದಲು ತನ್ನ ಮಗ ಸತ್ತ, ಆಮೇಲೆ ಸೊಸೆ; ಇದ್ದ ಎತ್ತುಗಳನ್ನು ಮಾರಬೇಕಾಯಿತು; ಹೊಲದಲ್ಲಿ ದುಡಿಯುತ್ತಿದ್ದವನು ಹೊರಟುಹೋದ. ಜಮೀಂದಾರರು ಹಸುಗಳನ್ನು ಹೊಡೆದುಕೊಂಡು ಹೋದರು; ಈಗ ತನ್ನ ಕಣ್ಣು ಕೂಡ ಸರಿಯಾಗಿ ಕಾಣಿಸುತ್ತಿಲ್ಲ. ಇದಕ್ಕೆಲ್ಲಾ ರೇವತಿಯ ಕೆಟ್ಟ ದೃಷ್ಟಿಯೇ ಕಾರಣ. ಅವಳೇ ಒಂದು ಅಪಶಕುನ.

ಇಂಥ ಹಿಡಿಶಾಪ ಶುರುವಾದದ್ದೇ ತಡ, ರೇವತಿ ತನ್ನ ಅಜ್ಜಿಯಿಂದ ದೂರಸರಿದು ಕಣ್ಣೀರು ಸುರಿಸುತ್ತಾ ಮನೆಯ ಒಂದು ಮೂಲೆಯಲ್ಲೋ ಹಿತ್ತಿಲಲ್ಲೋ ಅಡಗಿಕೊಳ್ಳುತ್ತಿದ್ದಳು.

ಅಜ್ಜಿಯ ದೃಷ್ಟಿಯಲ್ಲಿ ವಾಸುವೂ ತಪ್ಪಿತಸ್ಥ. ಅವನಿಗೆ ಕಲಿಸುವ ಆಸೆ ಇಲ್ಲದಿದ್ದಿದ್ದರೆ ಹುಡುಗಿ ಹೋಗಿ ಕಲಿತುಕೊಳ್ಳುತ್ತಿರಲಿಲ್ಲ! ಆದರೆ, ಅಜ್ಜಿ ವಾಸುವನ್ನು ಹಳಿಯುವಂತಿರಲಿಲ್ಲ. ಯಾಕೆಂದರೆ, ಅವನಿಲ್ಲದೆ ಅವಳ ಬದುಕು ಸಾಗದು. ಜಮೀಂದಾರರು ಕ್ಷುಲ್ಲಕ ವಿಷಯಗಳನ್ನು ಕುರಿತು ಸ್ಪಷ್ಟನೆಗಳನ್ನು ಕೇಳುತ್ತಲೇ ಇದ್ದರು. ಎರಡು ದಿನಗಳಿಗೊಮ್ಮೆ ಅವರ ದೂತನೊಬ್ಬ ಬಂದು ಆ ಲೆಕ್ಕ ಈ ಲೆಕ್ಕ ಕೇಳುತ್ತಲೇ ಇದ್ದ. ವಾಸು ಮಾತ್ರ ಶ್ಯಾಮಬಂಧು ಬಿಟ್ಟುಹೋಗಿದ್ದ ಕಾಗದ ಪತ್ರಗಳಲ್ಲಿ ಅದನ್ನು ಹುಡುಕಿಕೊಡಬಲ್ಲವನಾಗಿದ್ದ. ಆದರೂ ಮುದುಕಿ ವಾಸುವಿನ ಬೆನ್ನ ಹಿಂದೆ ಕೆಲವೊಮ್ಮೆ ಆಡಿಕೊಳ್ಳುತ್ತಿದ್ದುದುಂಟು.

ಮನೆಯಲ್ಲಿ ಮೊದಲಿನಂತೆ ರೇವತಿಯ ಓಡಾಟವಿಲ್ಲ. ಅವಳು ಶೋಕಿಸುತ್ತಿದ್ದ ದಿನಗಳೂ ಕಣ್ಮರೆಯಾಗಿದ್ದವು. ಯಾರಿಗೂ ಅವಳ ಧ್ವನಿ ಕೇಳಿಸುತ್ತಿರಲಿಲ್ಲ, ಮನೆಯ ಹೊರಗೆ ಯಾರ ಕಣ್ಣಿಗೂ ಅವಳು ಬೀಳುತ್ತಿರಲಿಲ್ಲ. ಕಣ್ಣೀರಿನಿಂದ ತೊಯ್ದುಹೋದ, ಯಾತನೆ ತುಂಬಿದ ಅವಳ ಬಟ್ಟಲುಗಣ್ಣುಗಳು ನೀರಿನಲ್ಲಿ ತೇಲುತ್ತಿರುವ ನೀಲಿ ನೈದಿಲೆಗಳಂತೆ ಕಾಣುತ್ತಿದ್ದವು. ಅವಳ ಹೃದಯ, ಮನಸ್ಸು ಭಗ್ನಗೊಂಡಿದ್ದವು; ಅವಳಿಗೆ ಹಗಲೂ ಒಂದೇ ರಾತ್ರಿಯೂ ಒಂದೇ. ಸೂರ್ಯನಿಂದ ಅವಳಿಗೆ ಬೆಳಕಿರಲಿಲ್ಲ, ರಾತ್ರಿ ಕತ್ತಲು ತರುತ್ತಿರಲಿಲ್ಲ. ಪ್ರಪಂಚವೊಂದು ಬೇಗುದಿಯಿಂದಿರುವ ಶೂನ್ಯ. ಅವಳ ಮನಸ್ಸಿನ ತುಂಬ ತಂದೆ ತಾಯಿಗಳೇ ತುಂಬಿಹೋಗಿದ್ದರು. ಅವರ ಮುಖಗಳು ಅವಳ ಹೊಳೆಯುವ ಕಣ್ಣುಗಳ ಮುಂದೆ ತೂಗುತ್ತಿದ್ದವು. ಅವಳಿಗಂತೂ ಅವರು ನಿಜಕ್ಕೂ ಸತ್ತುಹೋಗಿದ್ದಾರೆಂದು ನಂಬಲಾಗುತ್ತಿರಲಿಲ್ಲ. ಹಸಿವು ಅವಳ ಹೊಟ್ಟೆಯನ್ನು ಕಲಕುತ್ತಿರಲಿಲ್ಲ, ನಿದ್ರೆ ಅವಳ ಕಣ್ಣುಗಳನ್ನು ಮುಚ್ಚುತ್ತಿರಲಿಲ್ಲ. ಅಜ್ಜಿಯ ಹೆದರಿಕೆಯಿಂದಾಗಿ ಮಾತ್ರ ಒಂದಿಷ್ಟು ತಿಂದಂತೆ ಮಾಡುತ್ತಿದ್ದಳು. ತುಂಬಾ ಸಣ್ಣಗಾಗಿದ್ದಳು, ಕೃಶವಾಗಿದ್ದಳು. ಮೂಳೆಗಳ ಮೇಲಿನ ಚರ್ಮ ಅಳ್ಳಕವಾಗಿತ್ತು. ಹಗಲು ರಾತ್ರಿ ನೆಲದ ಮೇಲೆ ಬಿದ್ದಿರುತ್ತಿದ್ದವಳಿಗೆ ಮೇಲೇಳುವುದೇ ಕಷ್ಟವಾಗಿತ್ತು. ವಾಸು ಮನೆಗೆ ಬಂದಾಗ ಮಾತ್ರ ಅವಳಲ್ಲೊಂದಿಷ್ಟು ಲವಲವಿಕೆ. ಕುಳಿತುಕೊಂಡು ಅವನನ್ನೇ ನೋಡುತ್ತಿದ್ದಳು; ಅವಳ ದೃಷ್ಟಿ ಅವನ ದೃಷ್ಟಿಯನ್ನು ಸಂಧಿಸಿದ್ದೇ ಮುಖ ಕೆಳಗೆ ಹಾಕುತ್ತಿದ್ದಳು. ಆದರೆ, ಮರು ಕ್ಷಣ ಜ್ವರ ಹಿಡಿದವಳಂತೆ ಅವನನ್ನೇ ದಿಟ್ಟಿಸುತ್ತಿದ್ದಳು. ವಾಸು ದಿನದಲ್ಲಿ ಒಂದೋ ಎರಡೋ ಗಂಟೆ ಅಲ್ಲಿರುವಾಗ ಅವಳ ಕಣ್ಣು, ಮನಸ್ಸು, ಹೃದಯಗಳು ಸಂಪೂರ್ಣವಾಗಿ ಅವನಿಂದ ತುಂಬಿಹೋಗುತ್ತಿದ್ದವು.

ಹೆಚ್ಚುಕಡಿಮೆ ಐದು ತಿಂಗಳು ಕಳೆಯಿತು. ಜ್ಯೇಷ್ಠಮಾಸದ ಒಂದು ಉರಿಬಿಸಿಲಿನ ಮಧ್ಯಾಹ್ನ